ದಿನಾಂಕ:21 ಏಪ್ರಿಲ್ 2014

# ಪ್ರಚಾರ ದಿನಚರಿ–21/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಜಗದೀಶ್ ಟೈಟ್ಲರ್ ಆತ್ಮರಕ್ಷಣೆ ಮಾಡುವ ಕ್ಯಾಪ್ಟನ್– ಸೈತಾನಿನ ಪರ ವಕೀಲ
1984ನೇ ಇಸವಿ ಕೆಟ್ಟ ನೆನಪುಗಳ ಇಸವಿಯಾಗಿ ಉಳಿದಿದೆ. ಶ್ರೀಮತಿ ಇಂದಿರ ಗಾಂಧಿ ಅವರ ಹತ್ಯೆಯ ನಂತರ ಅಮಾಯಕ ಸಿಖ್ಖರ ನರಮೇಧ ಭಾರತೀಯ ಪ್ರಜಾಪ್ರಭುತ್ವಕ್ಕೆ ಅಂಟಿದ ಕಪ್ಪು ಕಲೆಯಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಅಮಾಯಕರನ್ನು ಕೊಲ್ಲುವ ಘಟನೆ ಆತಂಕಕಾರಿ. ಇದಕ್ಕಿಂತ ಮಿಗಿಲಾದ ಸಂಗತಿ ಎಂದರೆ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಂಡಿರುವುದು.

ಸರ್ಕಾರದ ಕೈವಾಡ ಸ್ಪಷ್ಟವಾಗಿದೆ. ದಂಗೆಕೋರರ ಮೇಲೆ ಪೋಲಿಸರು ಗುಂಡು ಹಾರಿಸಲಿಲ್ಲ. ಲೂಟಿ ಮಾಡಲು ಕೊಲ್ಲಲು ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಹಲವಾರು ವರ್ಷಗಳು, ಆರೋಪ ಪಟ್ಟಿ ದಾಖಲಾಗಲಿಲ್ಲ. ಒಬ್ಬರನ್ನೂ ಬಂಧಿಸಲಿಲ್ಲ. ಅಂದಿನ ಪ್ರಧಾನ ಮಂತ್ರಿ ಶ್ರೀ ರಾಹುಲ್ ಗಾಂಧಿ ಅವರು ಹಿಂಸಾಚಾರಕ್ಕೆ ರಾಜಕೀಯ ವಿವೇಚನೆಯ ಲೇಪ ಹಚ್ಚಿದ್ದರು. ಕಾಂಗ್ರೆಸ್ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ಜಗನ್ನಾಥ್ ಮಿಶ್ರಾ ಆಯೋಗವು ಸರ್ಕಾರ ಪ್ರಾಯೋಜಿಸಿದ್ದ ಈ ದಂಗೆಯ ಮೇಲೆ ಪರದೆ ಮುಚ್ಚುವ ಪ್ರಯತ್ನ ಮಾಡಿತ್ತು. ನಿವೃತ್ತಿಯ ನಂತರ, ಈ ನ್ಯಾಯಮೂರ್ತಿಗೆ ಕಾಂಗ್ರೆಸ್ ಪಕ್ಷ ರಾಜ್ಯ ಸಭಾ ಸದಸ್ಯತ್ವ ನೀಡಿ ಗೌರವಿಸಿತ್ತು. ನಂತರ ಎನ್‌ಡಿಎ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ನಾನಾವತಿ ಆಯೋಗ ವಿಚಾರಣೆ ನಡೆಸಿ ಸತ್ಯಸಂಗತಿಯನ್ನು ಬಹಿರಂಗ ಪಡಿಸಿತ್ತು. ಅಂದಿನಿಂದ ತನಿಖಾ ಸಂಸ್ಥೆಗಳು ದಂಗೆಯಲ್ಲಿ ಶಾಮೀಲಾದವರ ವಿರುದ್ಧ ಕ್ರಮತೆಗೆದುಕೊಳ್ಳುವ ಪ್ರಯತ್ನ ಆರಂಭವಾಯಿತು.

ತನಿಖಾ ಹಾಗೂ ನ್ಯಾಯಿಕ ಪ್ರಕ್ರಿಯೆ ಮೂಲಕ ಸತ್ಯದ ಅನ್ವೇಷಣೆ ಆಗಬೇಕಿದೆ. ಕ್ಯಾಪ್ಟನ್ ಅಮರಿಂದರ್ ಸಿಂಗ್ ಸೈತಾನನ ಪರ ವಕಾಲತ್ತು ಮಾಡುತ್ತಿದ್ದು, ಜಗದೀಶ್ ಟೈಟ್ಲರ್‌ಗೆ ನಿರಪರಾಧಿ ಪಟ್ಟ ಕಟ್ಟಲು ನಿರ್ಧರಿಸಿದ್ದೇಕೆ? ದಂಗೆಯಲ್ಲಿ ಭಾಗಿ ಆದವನ ಅಪರಾಧ ಮರೆಮಾಚುವ ಪ್ರಯತ್ನ ಮಾಡುತ್ತಿರುವುದೇಕೆ? ಕೊಲೆಯಾದವರಿಗೆ ದೊರೆಯಬೇಕಾದ ನ್ಯಾಯಕ್ಕಿಂತ ವೈಯಕ್ತಿಕ ಹಾಗೂ ರಾಜಕೀಯ ಸಂಬಂಧವೇ ಹೆಚ್ಚು ಮುಖ್ಯವೆನಿಸಿದೆಯೇ?

ಮತ್ತೊಂದು ತಪ್ಪು ಹೇಳಿಕೆ
ಭೋಪಾಲ್ ಗ್ಯಾಸ್ ದುರಂತದಲ್ಲಿ ಅಸುನೀಗಿದವರ ವಿರುದ್ಧ "ಡೋ ಜೋನ್ಸ್" ಸಂಸ್ಥೆಯ ಪರ ವಕಾಲತ್ತು ವಹಿಸುವ ಆರೋಪವನ್ನು ಕ್ಯಾಪ್ಟನ್ ನನ್ನ ಮೇಲೆ ಹೇರಿದ್ದಾರೆ. ಯೂನಿಯನ್ ಕಾರ್ಬೈಡ್ ಅಥವಾ ಭೋಪಾಲ್ ಗ್ಯಾಸ್ ದುರಂತ ಹಾಗೂ ಡೋ ಜೋನ್ಸ್‌ಗೂ ಯಾವುದೇ ಸಂಬಂಧವಿಲ್ಲ. ಅದೊಂದು ಅಮೇರಿಕಾದ ಪ್ರಮುಖ ಆರ್ಥಿಕ ಸಂಸ್ಥೆಯಾಗಿದೆ. ವಾಲ್ ಸ್ಟ್ರೀಟ್ ಪತ್ರಿಕೆಯನ್ನು ಡೋ ಜೋನ್ಸ್ ನಡೆಸುತ್ತಿದೆ. ಭೋಪಾಲ್ ಗ್ಯಾಸ್ ದುರಂತದಲ್ಲಿ ಅಸುನೀಗಿದವರ ಪರ ವಕಾಲತ್ತು ವಹಿಸಿದ್ದು, ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರ ರಾಜಕೀಯ ಪಕ್ಷದ ಮುಖ್ಯ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಅವರು. ನನ್ನ ವೃತ್ತಿಪರತೆಯ ಭಾಗವಾಗಿ ನಾನು ಸಾವಿರಾರು ಕಕ್ಷಿದಾರರ ಪರವಾಗಿ ವಾದಿಸಿದ್ದೇನೆ ಸಲಹೆ ನೀಡಿದ್ದೇನೆ. ದುರಂತದಲ್ಲಿ ಭಾಗಿಯಾಗದ ಕಂಪನಿಯೊಂದು ಅಥವಾ ವ್ಯಕ್ತಿ ನನ್ನ ಸಲಹೆಯ ಲಾಭ ಪಡೆಯಲು ಇಚ್ಛಿಸಿದರೆ, ವಕೀಲನಾದ

ನಾನು ಅವರಿಗೆ ಸರಿಯಾದ ಕಾನೂನು ಸಲಹೆ ನೀಡುವುದು ನನ್ನ ವೃತ್ತಿಪರ ಕರ್ತವ್ಯವಾಗಿದೆ. ಅದನ್ನೇ ನಾನು ಮಾಡಿದ್ದೇನೆ.

ಭಾರತದ ರಕ್ಷಣಾಪಡೆ ಸಿಬ್ಬಂದಿಗಳ ದುರ್ದೈವ

ಚುನಾವಣಾ ಪ್ರಚಾರ ಮುಂದುವರಿದಂತೆ, ದೇಶದ ವಿವಿಧ ಭಾಗಗಳಲ್ಲಿ ವಾಸಿಸುವ ನಿವೃತ್ತ ರಕ್ಷಣಾ ಸಿಬ್ಬಂದಿಗಳನ್ನು ಭೇಟಿ ಮಾಡುವ ಅವಕಾಶ ದೊರೆತಿದೆ. ಭಾರತ ದಾಳಿಗೆ ಒಳಗಾದಾಗಲೆಲ್ಲ ಅವರು ಅದರ ರಕ್ಷಣೆಗೆ ಹೋರಾಡಿದ್ದಾರೆ. ದೇಶಪ್ರೇಮ ಮೆರೆದಿರುವ ಅವರು ಸುಸಂಪನ್ನ ನಾಗರೀಕರಾಗಿದ್ದಾರೆ. ನಿವೃತ್ತ ರಕ್ಷಣಾ ಪಡೆ ಸಿಬ್ಬಂದಿಗಳ ಕಾಳಜಿಯ ವಿಚಾರವಾದ ಒಂದು ರ್‍ಯಾಂಕ್ ಒಂದು ಪಿಂಚಣಿಯು ಇತ್ಯರ್ಥವಾಗದೆ ವಿಳಂಬವಾಗಿದೆ.

"ಒಂದು ರ್‍ಯಾಂಕ್ ಒಂದು ಪಿಂಚಣಿ" ನೀಡುವ ಭರವಸೆಯನ್ನು ಭಾಜಪ ತನ್ನ ಪ್ರಣಾಳಿಕೆಯಲ್ಲಿ ಮಾಡಿದೆ. ಇದನ್ನು ಜಾರಿಗೆ ತರಲು ನಾವು ಬದ್ಧರಾಗಿದ್ದೇವೆ. ಮಾಜಿ ಸೈನಿಕರಿಗೆ ಸುಳ್ಳು ಆಶ್ವಾಸನೆಯನ್ನು ಕಾಂಗ್ರೆಸ್ ಸರ್ಕಾರ ನೀಡುತ್ತಾ ಬಂದಿದೆ. ಕೆಲವು ವರ್ಷಗಳ ಹಿಂದೆ, ಹಣಕಾಸು ಸಚಿವರು ಮಂಡಿಸಿದ್ದ ಮುಂಗಡ ಪತ್ರದ ಭಾಷಣದಲ್ಲಿ ಪ್ರಕಟಿಸಿದಂತೆ, ಮಾಜಿ ಸೈನಿಕರ ಬೇಡಿಕೆ ಅಂಗೀಕರಿಸಿದ್ದರು. ಆದರೆ ನಂತರ, ಈ ಘೋಷಣೆ ಎಲ್ಲಾ ಮಾಜಿ ಸೈನಿಕರಿಗೂ ಅನ್ವಯಿಸದೆ ಕೇವಲ ಕೆಲವು ವರ್ಗಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ತಿಳಿದುಬಂತು. ಈ ವರ್ಷ ಮತ್ತೊಮ್ಮೆ ಹಣಕಾಸು ಸಚಿವರು ತಮ್ಮ ಆಯವ್ಯಯ ಭಾಷಣದಲ್ಲಿ ಮಾಜಿ ಸೈನಿಕರ ಬೇಡಿಕೆಯನ್ನು ಒಪ್ಪಿಕೊಂಡರು. ಆದರೆ ಮತ್ತೊಮ್ಮೆ ಮಾಜಿ ಸೈನಿಕರ ಮೂಗಿಗೆ ತುಪ್ಪ ಹಚ್ಚುವ ಕೆಲಸವಾಗಿದೆ. ಈ ಬೇಡಿಕೆ ಈಡೇರಲು ಅಗತ್ಯ ಅಧಿಸೂಚನೆಯನ್ನು ಈವರೆಗೂ ನೀಡಲಾಗಿಲ್ಲ.

ಭಾರತದ ರಕ್ಷಣಾ ಸಿದ್ಧತೆಯ ಕೊರತೆ ಮತ್ತೊಂದು ಕಾಳಜಿಯ ವಿಷಯವಾಗಿದೆ. ನಮ್ಮ ರಕ್ಷಣಾ ಖರೀದಿ ತೀವ್ರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ. ರಕ್ಷಣಾ ಖಾತೆ ಸಚಿವರಾದ ಎ.ಕೆ.ಆಂಥೋಣಿ ಅವರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳದೆ ಇರುವುದೇ ಇದಕ್ಕೆ ಪ್ರಮುಖ ಕಾರಣ. ಇಂದು ಭಾರತದ ಭೌಗೋಳಿಕ ರಣತಂತ್ರ ವಸ್ತುಸ್ಥಿತಿ ಬದಲಾಯಿಸಿದೆ. ಪಾಕಿಸ್ತಾನ ಮತ್ತು ಚೀನಾಗಳ ನಡುವೆ ಮಿಲಿಟರಿ ಹೊಂದಾಣಿಕೆ ಹೆಚ್ಚಿದೆ. ಚೀನಾ ದಿಟ್ಟತನದಲ್ಲಿ ನಡೆದುಕೊಳ್ಳುತ್ತಿದೆ, ಪಾಕಿಸ್ತಾನ ಗಡಿಭಾಗದಲ್ಲಿ ಆಗಿಂದಾಗ್ಗೆ ನಡೆಸಿರುವ ಉಪಟಳ ನೋಡಿದಾಗ ಭಾರತ ತನ್ನ ರಕ್ಷಣಾ ಕವಚ ಸದೃಢ ಪಡಿಸಿಕೊಳ್ಳುವ ಅಗತ್ಯವಿದೆ. ಆದರೂ ರಕ್ಷಣಾ ಉಪಕರಣಗಳ ಆಧುನೀಕರಣ ಪ್ರಗತಿ ಶೋಚನೀಯವಾಗಿದೆ.  ಓಬಿರಾಯನ ಕಾಲದ ತಂತ್ರಜ್ಞಾನದ ಬದಲು ಆಧುನಿಕ ಸರ್ವಶ್ರೇಷ್ಠ ತಂತ್ರಜ್ಞಾನವನ್ನು ಅಳವಡಿಬೇಕಾಗಿದೆ. ಪಾಕಿಸ್ತಾನದ ಹೋಲಿಕೆಯಲ್ಲಿ ಭಾರತದ ಮಿಲಿಟರಿ ಶೇಷ್ಠತೆಯ ಅಂತರ ತಗ್ಗಿದಂತಿದೆ. 15,000 ಕಿ.ಮೀ ಉದ್ದದ ಅಂತಾರಾಷ್ಟ್ರೀಯ ಗಡಿಭಾಗ ಹೊಂದಿದ ದೇಶ ಓಬಿರಾಯನ ಕಾಲದ ತಂತ್ರಜ್ಞಾನವನ್ನು ಅವಲಂಬಿಸುವಂತಿಲ್ಲ. ಇತ್ತೀಚಿಗಷ್ಟೆ ಭಾರತೀಯ ಜಲಾಂತರ್ಗಾಮಿ ನೌಕೆ ದುರ್ಘಟನೆಗೆ ಈಡಾಗಿದ್ದು, ನಮ್ಮ ನೌಕಾಪಡೆ ಓಬಿರಾಯನ ಕಾಲದ ಯುದ್ಧ ನೌಕೆಗಳನ್ನು ಹೊಂದಿರುವುದಕ್ಕೆ ನಿದರ್ಶನವಾಗಿದೆ. ಇನ್ನೊಂದೆಡೆ ಚೀನಾ ತನ್ನ ಗಡಿ ಭಾಗದಲ್ಲಿ ಉತ್ತಮ ಮೂಲಸೌಕರ್ಯಗಳನ್ನು ನಿರ್ಮಿಸುತ್ತಿದೆ. ನಾವು ನಮ್ಮ ಭಾಗದಲ್ಲಿ ಇದನ್ನು ಕಡೆಗಣಿಸಿದ್ದೇವೆ.

ರಾಷ್ಟ್ರ ಮೊದಲು ಎಂಬ ಸಿದ್ಧಾಂತ ಹೊಂದಿರುವ ಭಾಜಪ, ರಕ್ಷಣಾ ಸಿದ್ಧತೆಗೆ ಮೊದಲ ಆದ್ಯತೆ ನೀಡಲು ಕಟಿಬದ್ಧವಾಗಿದೆ.

✲✲✲✲✲